**ಕರ್ನಾಟಕ ವಿಧಾನ ಪರಿಷತ್ತು**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 240 (323)

ಸದಸ್ಯರ ಹೆಸರು : ಶ್ರೀಮತಿ ಭಾರತಿಶೆಟ್ಟಿ (ನಾಮನಿರ್ದೇಶನ ಹೊಂದಿದವರು)

ಉತ್ತರಿಸುವ ದಿನಾಂಕ : 03-02-2021

ಉತ್ತರಿಸುವ ಸಚಿವರು : ಉಪ ಮುಖ್ಯ ಮಂತ್ರಿಗಳು ಹಾಗೂ ಲೋಕೋಪಯೋಗಿ

| ಕ್ರಸ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ. | ಕಾಮಗಾರಿ ಗುಣ ನಿಯಂತ್ರಣ ಕಾರ್ಯಪಡೆಯು 2004ರಲ್ಲಿ ಸಲ್ಲಿಸಿದ ವರದಿಯ ಶಿಫಾರಸ್ಸುಗಳನ್ನು ಜಾರಿಗೆ ತರಲಾಗಿದೆಯೇ? ಹಾಗಿದ್ದಲ್ಲಿ, ಜಾರಿಗೆ ತಂದಿರುವ ಶಿಫಾರಸ್ಸುಗಳ ವಿವರ ನೀಡುವುದು: | 2004ರಲ್ಲಿ ಯಾವುದೇ ಕಾಮಗಾರಿ ಗುಣನಿಯಂತ್ರಣ ಕಾರ್ಯಪಡೆ ರಚನೆಯಾಗಿರುವುದಿಲ್ಲ.<br>ಕಾಮಗಾರಿಗಳ ಗುಣನಿಯಂತ್ರಣ ಕಾರ್ಯಪಡೆಯನ್ನು ಸರ್ಕಾರದ ಆದೇಶ ಸಂಖ್ಯೆ ಲೋಇ:64:ಇಎಪಿ:2008 ದಿನಾಂಕ 03-11-2008ರಲ್ಲಿ ಡಾ. ಸಿಎಸ್ ವಿಶ್ವನಾಥ್ ಇವರ ಅಧ್ಯಕ್ಷತೆಯಲ್ಲಿ ಸೃಜಿಸಲಾಗಿದೆ. ಈ ಕಾರ್ಯಪಡೆಯು ಮಧ್ಯಂತರ ಶಿಫಾರಸ್ಸು ವರದಿಯನ್ನು ದಿನಾಂಕ 12-09-2012ರಂದು ಸಲ್ಲಿಸಿರುತ್ತದೆ.<br>ತದನಂತರ ಸರ್ಕಾರದ ಆದೇಶ ಸಂಖ್ಯೆ ಲೋಇ 121 ಇಎಪಿ 2013 ದಿನಾಂಕ 13-10-2014ರಲ್ಲಿ ಈ ಕಾರ್ಯಪಡೆಯನ್ನು ಡಾ. ಬಿ.ಆರ್. ಶ್ರೀನಿವಾಸ ಮೂರ್ತಿ ಇವರ ಅಧ್ಯಕ್ಷತೆಯಲ್ಲಿ ಪುನರ್ ರಚಿಸಲಾಗಿದೆ.<br>ಆದ್ದರಿಂದ ಡಾ. ಸಿ.ಎಸ್. ವಿಶ್ವನಾಥ್ ಇವರ ಅಧ್ಯಕ್ಷತೆಯಲ್ಲಿ ಸಲ್ಲಿಸಿದ್ದ ಮಧ್ಯಂತರ ವರದಿಯ ಶಿಫಾರಸ್ಸುಗಳ ಅನುಷ್ಠಾನದ ಬಗ್ಗೆ ಯಾವುದೆ ಪ್ರತ್ಯೇಕ ಕ್ರಮ ವಹಿಸಿರುವುದಿಲ್ಲ. ಈ ಶಿಫಾರಸ್ಸಿನಲ್ಲಿ 40 ಆಡಳಿತಾತ್ಮಕ ಶಿಫಾರಸ್ಸು ಹಾಗೂ 43 |
| ಆ. | ಜಾರಿಗೆ ತರಲಾಗದಿರುವ ಶಿಫಾರಸ್ಸುಗಳು ಯಾವುವು? ಇದಕ್ಕೆ ಕಾರಣಗಳೇನು? | ತಾಂತ್ರಿಕ ಶಿಫಾರಸ್ಸುಗಳು ಒಳಗೊಂಡಿರುತ್ತದೆ. ಹಾಗೂ ಈ ವರದಿಯ ಶಿಫಾರಸ್ಸುಗಳು ವಿವಿಧ ಇಲಾಖೆಗಳಾದ ಲೋಕೋಪಯೋಗಿ, ಜಲಸಂಪನ್ಮೂಲ ಹಾಗೂ ನಗರಾಭಿವೃದ್ಧಿ ಇಲಾಖೆಗಳಿಗೆ ಅನ್ವಯಿಸುತ್ತಿದ್ದು, ಪ್ರಸ್ತುತ ಈ ಮಧ್ಯಂತರ ವರದಿಯ ಶಿಫಾರಸ್ಸುಗಳನ್ನು ಚಾಲ್ತಿಯಲ್ಲಿರುವ ನಿಯಮಾವಳಿಗಳು, ಸಂಪನ್ಮೂಲ ಲಭ್ಯತೆ, ಮುಂತಾದ ಅಂಶಗಳನ್ನು ಪರಿಶೀಲಿಸಿ ಜಾರಿಗೆ ತರಲು ಕ್ರಮ ವಹಿಸಲಾಗುವುದು. |

ಸಂಖ್ಯೆ: ಲೋಇ 05 ಆರ್‌ಡಿಎಫ್ 2021

(ಗೋವಿಂದ.ಎಂ.ಕಾರಜೋಳ)
ಉಪ ಮುಖ್ಯ ಮಂತ್ರಿಗಳು ಹಾಗೂ
ಲೋಕೋಪಯೋಗಿ ಸಚಿವರು